**ಉಳಿತಾಯ ಬ್ಯಾಂಕ್ /ಚಾಲ್ತಿ ಖಾತೆಗಳನ್ನು ನಿರ್ವಹಿಸುತ್ತಿರುವ ಗ್ರಾಹಕರ ಪಾಸ್‌ಪುಸ್ತಕಗಳನ್ನು ಅಪ್‌ಡೇಟ್ ಮಾಡುವುದು**

ಯುಬಿಡಿ.ಸಿಒ.ಪಿಒಟಿ.ಪಿಸಿಬಿ.ಸುತ್ತೋಲೆ/02/09.11.00/2002–03 18 ಜುಲೈ 2002
27 ಆಷಾಡ 1924 (ಶಕ)

ಎಲ್ಲ ಪ್ರಾಥಮಿಕ ನಗರ ಸಹಕಾರ ಬ್ಯಾಂಕುಗಳ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.

ಮಾನ್ಯರೇ,

**ಉಳಿತಾಯ ಬ್ಯಾಂಕ್ / ಚಾಲ್ತಿ ಖಾತೆಗಳನ್ನು ನಿರ್ವಹಿಸುತ್ತಿರುವ ಗ್ರಾಹಕರ ಪಾಸ್‌ಪುಸ್ತಕಗಳನ್ನು ಅಪ್‌ಡೇಟ್ ಮಾಡುವುದು**

ಪಾಸ್‌ಪುಸ್ತಕಗಳನ್ನು ಅಪ್‌ಡೇಟ್ ಮಾಡುವಾಗ ಪಾಸ್ ಪುಸ್ತಕಗಳಲ್ಲಿನ ನಮೂದುಗಳನ್ನು ಗಣಕಯಂತ್ರಗಳ ಮೂಲಕ ಮಾಡುವ ಕೆಲವು ಬ್ಯಾಂಕುಗಳಲ್ಲಿ, ಅಂಥ ನಮೂದುಗಳು ಚೆಕ್ ನಂಬರು, ಹುಟ್ಟುವಳಿಯನ್ನು ಯಾರಿಂದ ಸ್ವೀಕರಿಸಲಾಗಿದೆಯೋ ಆ ಪಕ್ಷಕಾರನ ಹೆಸರು ಮುಂತಾದ ವಿವರಗಳು ಒಳಗೊಂಡಿರುವುದಿಲ್ಲ ಎಂಬುದನ್ನು ರಿಸರ್ವ್ ಬ್ಯಾಂಕ್‌ನ ಗಮನಕ್ಕೆ ತರಲಾಗಿದೆ " by clg " ಅಥವಾ "to clg" ಈ ಸೂಚನೆ, ನಿರ್ದಿಷ್ಟವಾಗಿ ಒಂದೇ ಅಂಕಿ ಬೇರೆ ಬೇರೆ ದಿನಾಂಕಗಳಂದು ಕಾಣಿಸುವಾಗ ತುಂಬಾ ಸಂದಿಗ್ದತೆಯಿಂದ ಕೂಡಿರುತ್ತದೆ.

ಖಾತೆದಾರರ ಸಮಸ್ಯೆಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮತ್ತು ಉತ್ತಮ ಗ್ರಾಹಕ ಸೇವೆಯ ಭಾಗವಾಗಿ ಸಹಾ, ಗ್ರಾಹಕನು ಚೆಕ್‌ಗಳನ್ನು ನೀಡುವ ಮೂಲಕ ಮತ್ತು ಬ್ಯಾಂಕರ್‌ಗಳ ತೀರುವೆ ಕೇಂದ್ರಗಳ ಮೂಲಕ ಸಲ್ಲಿಸುವ ಮೂಲಕ ಹಣ ತೆಗೆಯಲಾಗಿದೆಯೋ ಅಥವಾ ವಿದ್ಯುನ್ಮಾನ ತೀರುವಳಿ ಸೇವೆಯನ್ನು ಬಳಸಿಕೊಂಡು ನಮೂದುಗಳನ್ನು ಮೂಡಿಸಲಾಗಿದೆಯೋ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ ಪ್ರತಿಯೊಂದು ವ್ಯವಹಾರದ ಎಲ್ಲ ವ್ಯವಹಾರಗಳನ್ನು ಒಳಗೊಂಡಿರುವಂತೆ ಪ್ಯಾಕೇಜುಗಳನ್ನು ಪುನರ್ ರೂಪಿಸುವ ಮೂಲಕ ಪೂರ್ಣ ಮಾಹಿತಿಯನ್ನು ಒದಗಿಸಲು ಬ್ಯಾಂಕುಗಳು ಪ್ರಯತ್ನಿಸಬೇಕು.

ತಮ್ಮ ವಿಶ್ವಾಸಿ,

(ಎಸ್. ವಿ. ಸರಾಫ್)
ಉಪ ಪ್ರಧಾನ ವ್ಯವಸ್ಥಾಪಕರು.